

# ಅಮ್ಮನಿಗೆ ಹಾಗಾಗಿತ್ತು

■ ಪ್ರಾಣೇಶ್ ರಾವ್ ವಿ.

ಕಲಾಕೃತಿ: ಪಿ.ಬಿ. ಗವಾನಿ

ಅಪ್ಪನಿಗೆ ಆ ದಿನ ಮುಂಜಾನೆ ಏನಾಗಿತ್ತೋ ಏನೋ ತುಂಬಾ ಖುಷಿಯಾಗಿದ್ರು. ಭಾಳಾಮಟ್ಟಿಗೆ ಅವತ್ತು ಒಂದ್ನೇ ತಾರೀಕಾಗಿರ್ಬೇಕು.

ಅಪ್ಪ ನಗ್ತಾ ನಗಿಸ್ತಾ ಕಿಚಾಯಿಸ್ತಾ ಕಾಲೆಳೀತಾ ಗಲಾಟೆ ಎಬ್ಬಿಸಿದ್ರು. ಇದೇ ಖುಷೀನಾಗೆ ನನ್ನ ಪುಟ್ಟ ತಂಗಿ ಚಂದ್ರೂನ ಕರೆದು, ‘‘ಲೇ ಪಿಚ್ಚಮ್ಮ ಬಾರೆ ಇಲ್ಲಿ, ಒಳಗೋಗಿ ಅಮ್ಮನ್ನ ಕೇಳಿ ಒಂತಟುಕು ‘ದ್ರಾವಕ’ ಇದ್ರೆ ತಗೊಂಡ್ಬಾ’’ ಅಂದ್ರು. ಒಳಗಿದ್ದ ಅಮ್ಮನಿಗೆ ಅದ್ಹೇಗೋ ಕೇಳಿಸಿ, ಈಗ ಸ್ವಲ್ಪೊತ್ತಿನ್ಕೆಳಗೆ ಎಲ್ಲಾ ಇಲ್ಲೇ ಕೂತು ಕಾಫಿ, sಸೆಂಡಿ ಹೋಗೀರಿ ಮತ್ತೆ ಈಗೆನ್ನೆಂಥಾದ್ದು ದ್ರಾವಕ ಅದೂ ಇದು. ಇರ್ಲಿ ಹೋಗ್ರಿ ನಂಗೇ ಸಾಕಷ್ಟು ಕೆಲಸ ಬಿದ್ದದೆ’ ಅಂತ ಮಾತು ಒಡ್ಡ್ಯಾಕಿದ್ಲು. ‘ಇಲ್ ಮಾರಾಯಳೇ ಯಾಕೋ ಬಾಯಿ ಒಣಗ್ಯದೆ. ಒಂತಟುಕು ಕೊಡಬಾರ್ದಾ’ ಅಂತ ಧೋತ್ರ ಸರಿಮಾಡಿಕೊಳ್ಳುತ್ತ ಅಡಿಗೆ ಮನೆ ಕಡೆ ಹೋದ್ರು.

ಅಡಿಗಿ ಮನ್ಯಾಗೆ ಕೂತು ಅಷ್ಟು ದ್ರಾವಕ ಗಂಟಲಿಗಿಳಿಸಿ ಕಫ ಕ್ಯಾಕರಿಸ್ತಾ ಈಚೆ ಬಂದು ಪಡಸಾಲೆಯಲ್ಲಿ ಚಕ್ಕಂಬಕ್ಕ ಹಾಕಿ ಕೂತು ಒಂಟಿ ಜಡೆ ಹಾಕ್ಕೊಂಡು ಪುಟ್ಟ ಲಂಗಚೋಲಿಯಲ್ಲಿ ಪುಟಿದಾಡ್ತಾ ಅಲ್ಲಿ ಓಡಾಡ್ತಿದ್ದ ಮಗಳನ್ನು ಕರೆದು ತೊಡೆ ಮೇಲೆ ಕೂಡಿಸಿಕೊಳ್ಳ ಹೋದ್ರು. ‘ಅಪ್ಪ ಬಿಡಪ್ಪ ನಾ ಹೋಗ್ಬೇಕು’ ಅಂತ ಅವಳಂದಾಗ ‘ಏ ಎಲ್ಲಿಗೆ?! ಯಾವ ರಾಜಕಾರ್ಯನೆ ನಿಂಗೆ? ಒಳ್ಳೆ ಕಳ್ರಮನೆ ಕಳಸಗಿತ್ತಿ ಹಾಗೆ ಓಡಾಡ್ತದ್ದೀಯಾ...’ ಅಂತ ಎಳೆದಾಡಿದ್ರು. ‘ಇಲ್ಲಪ್ಪ ಪೀಡಬಲ್ಲ್ಯೂ ಮನ್ಯಾಗೆ ಎರಡು ಬೆಕ್ಕಿನ್ಮರಿ ಅವಂತೆ ನೋಕಂಬತ್ತೀನಪ್ಪ ಬಿಡಪ್ಪ’ ಅಂತ ಕೊಸರಾಡಿದ್ರೆ ಅವಳ ತಲೆ ಮೇಲೆ ತಬಲಾ ಬಾರಿಸ್ತಾ, ‘ಹೈದ್ರಾಬಾದಿನಿಂದ ತಂದಿನಿ ಮದಲಿ, ನಮ್ಮ ಮದಲಿ ನಿಮ್ಮ ಮದಲಿ ಮಾಡಣ ಬದಲಿ. ನಮ್ಮ ಮದಲಿಗೆ ಒಂಭತ್ತು ಕಣ್ಣು ನಡುವಲಕಣ್ಣ ಬಲು ಸಣ್ಣ ಬಲು ಸಣ್ಣ...’ ಅಂತ ಹಾಡೋಕ್ಸುರು ಮಾಡಿದ್ರು. ನಂತರ ದೊಡ್ಡದಾಗಿ ನಗ್ತಾ ‘ಅದು ಪೀಡಬಲ್ಲ್ಯೂ ಅಲ್ಲ ಪಿಡಬ್ಲ್ಯೂಡಿ ಅಂತ ಅನ್ಬೇಕು. ಗೋತ್ತಾಯ್ತೇನೆ’ ಅಂದ್ರು.

ಈ ಕಡೆ ನೋಡ್ತಾರೆ ನನ್ನಮ್ಮ ಭಾಳ ಅಪರೂಪಕ್ಕೆ ಪಾಠ ಓದುತ್ತಾ ಕೂತಾನೆ! ‘ಏನಪ್ಪಾ ಅಬಣ್ಣ ಏನ್ಮಾಡ್ತಿದ್ದೀ’ ಕೇಳಿದ್ರು. ‘ನಾ ಅದ್ಕಂತದ್ದೀನ್ಪಾ’ ಅಂತ ಅವನಂದ್ರೆ, ‘ಅಲ್ಲೋ ನೀ ಅಕಕ್ಮಾತ್ಪಾಸಾದ್ರೆ ಏನ್ಪಾ ನಮ್ಗತಿ. ಆಗ ನಾವು ಯಾವ್ದೇಪ್ರಿಗ್ಹೇಳ್ಕಮಣ ಹೇಳು!’ ಅಂತ ಅವನ್ನ ಕಿಚಾಯಿಸಿದ್ರು. ಅಡಿಗೆ ಮನ್ಯಾಗಿದ್ದ ಅಮ್ಮ ಒಗ್ಗರಣೆ ಸೌಟು ಹಿಡಿದು ಈಚೆ ಬರ್ತಾ ಮನಸಾರೆ ನಗ್ತಾ ನಿಂತು ಬಿಟ್ಲು. ‘ಏನೋ ನನ್ಮೂಕಸು ಓತ್ತಾ ಅದೆ. ಮೆಚ್ಚಿಕೊಂಬೋದ್ಬಿಟ್ಟು ಅದೇನು ಟೊಂಗುಟಿಸ್ಕು ಅಂತ ಮಾತಾಡ್ತೀರಿ. ನೀ ಓದ್ಕೊ ಕೂಸು. ಅನ್ನ ಆದ್ಮೂಡ್ಲೆ ಊಟಕ್ಹಾಕ್ತೀನಿ’ ಅಂತ ಸೆರಗಿನಿಂದ ಕಣ್ಣೊರಸಿಕೊಳ್ಳುತ್ತ ಮತ್ತೆ ಅಡಿಗೆ ಮನಿ ಸೇರಿದ್ಲು.

ಅಮ್ಮನಿಗೆ ಅತ್ತೆ ನಾದಿನಿಯರ ಕಾಟ ಅಂದ್ರೆ ಯಮಕಾಟ! ಹಾಗಾಗಿ ಅವಳು ನಕ್ಕಿದ್ದೇ ಅಪರೂಪ! ಇನ್ನು ಅಪ್ಪ, ಕಕ್ಕ ಸದಾ ತಾಯಿ ತಂಗಿಯರ ಪರ ಇದ್ದು ಅಮ್ಮ ಕಕ್ಕಿಯರನ್ನು ಸದಾ ಅಳಿಸುತ್ತಿದ್ರು. ಅಮ್ಮಗಂತೂ ಮಕ್ಕುಮರಿ ಇದ್ರು. ಆದರೆ ಮಕ್ಕಳೇ